## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 14.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ಮತುತ 4 ನೇ ಎದುರುದಾರರ ಪರ ಶ್ರೀ.ಎಸ್ ಕೆ ಕೆ ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುವ ದಾಖಲೆಗಳಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ ಎಂದರೆ ಸರಿ. ವಾಹನ ನಂ.ಕೆಎ-30/8778 ದ ಚಾಲಕನಿಗೆ ಚಾಲನೆ ಮಾಡಲು ಚಾಲನಾ ಪರವಾನಿಗೆ ಇರಲಿಲ್ಲ ಎಂದು ಪೊಲೀಸರು ಆತನ ಮೇಲೆ ಕೇಸ್ ದಾಖಲಿಸಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ನನ್ನ ಸ್ಕೂಟಿ ಹಾಗೂ ಇತರೆ ಎರಡು ವಾಹನಗಳು ಒಳಗೊಂಡಿವೆ ಎಂದರೆ ಸರಿ. ನನ್ನ ಜನ್ಮ ದಿನಾಂಕ 06/01/1987 ಇರುತ್ತದೆ. ನನಗೆ ಅಪಘಾತದಿಂದ ಮೂಳೆ ಮುರಿತದ ಗಾಯಗಳು ಆಗಿಲ್ಲ ಎಂದರೆ ಸರಿ. ನನ್ನ ಉದ್ಯೋಗ ಮನೆಕೆಲಸ ಎಂದರೆ ಸಾಕ್ಷಿ ಮನೆಕೆಲಸದ ಜೊತೆ ಟೇಲರಿಂಗ್ ಕೂಡ ಮಾಡುತ್ತೇನೆ ಎನ್ನುತ್ತಾರೆ. ಈ ಅಪಘಾತದ ಸಂಬಂಧ ನಾನೇ ದೂರು ನೀಡಿರುತ್ತೇನೆ ಎಂದರೆ ಸರಿ. ನಾನು ನೀಡಿರುವ ನಿಪಿ.2 ರಲ್ಲಿ ನನ್ನ ಉದ್ಯೋಗ ಮನೆಕೆಲಸ ಎಂಬುದಾಗಿ ಇದೆ ಎಂದರೆ ಸಾಕ್ಷಿ ನಾನು ಹೇಳಿದ್ದೆ ಆದರೆ ಅವರು ಬರೆದಿಲ್ಲ ಎನ್ನುತ್ತಾರೆ. ನಿಪಿ.2 ರಲ್ಲಿ ನನ್ನ ಉದ್ಯೋಗ ಟೇಲರಿಂಗ್ ಎಂಬುದಾಗಿ ಹೇಳಿದರೂ ಅವರು ಕೇವಲ ಮನೆಕೆಲಸ ಎಂಬುದಾಗಿ ಬರೆದುಕೊಂಡಿದ್ದಾರೆಂದು ಅದನ್ನು ಸರಿಪಡಿಸಲು ಪೊಲೀಸರಿಗೆ ಅರ್ಜಿ ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.6 ರಲ್ಲೂ ಕೂಡ ನನ್ನ ಉದ್ಯೋಗ ಟೇಲರಿಂಗ್ ಎಂಬುದಾಗಿ ಕಾಣಿಸಿಲ್ಲ ಎಂದರೆ ಕಾಣಿಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಟೇಲರಿಂಗ್ ಮಾಡುವ ಬಗ್ಗೆ ಕೋರ್ಸ ಮಾಡಿದ ಬಗ್ಗೆ ಯಾವುದಾದರೂ ಪ್ರಮಾಣಪತ್ರ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ ಹಾಗೂ ಸದರಿ ಟೇಲರಿಂಗ್ ಮಶೀನ್ ತೆಗೆದುಕೊಂಡ ಬಗ್ಗೆ ಏನಾದರೂ ರಶೀದಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.2 ರಲ್ಲಿ ಬರೆದಿರುವ ವಿಚಾರ ಸರಿ ಇದೆಯಾ ಎಂದರೆ ಸಾಕ್ಷಿ ಹೌದು ಸರಿ ಇದೆ ಎನ್ನುತ್ತಾರೆ. ಅದರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನ್ನ ಯಾವುದೇ ತಕರಾರು ಇಲ್ಲ ಎಂದರೆ ಸರಿ. ದೂರನ್ನು ನಾನು ಸೆಕ್ಯೂರ್ ಆಸ್ಪತ್ರೆಯಲ್ಲಿ ಕೊಟ್ಟಿರುತ್ತೇನೆ. ಗಾಯದ ಪ್ರಮಾಣಪತ್ರದ ಪ್ರಕಾರ ನನಗೆಲ್ಲಾ ಸಾದಾ ಸ್ವರೂಪದ ಗಾಯಗಳಾಗಿದ್ದು ಅವುಗಳೆಲ್ಲ ಗುಣಮುಖವಾಗಿವೆ ಎಂದರೆ ಸಾಕ್ಷಿ ನೋವು ಇದೆ ಎನ್ನುತ್ತಾರೆ. ಸದರಿ ಗಾಯಗಳ ಬಗ್ಗೆ ನಿಮಗೆ ಅಂಗನ್ಯೂನತೆಯಾಗಿದೆ ಎಂದು ಚಿಕಿತ್ಸೆ ನೀಡಿದ ವೈದ್ಯರ ಬಳಿ ಪ್ರಮಾಣಪತ್ರ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿಃ 12/05/2021 ರಂದು ನಾನು ಆಸ್ಪತ್ರೆಗೆ ಹೋಗಿದ್ದು ಅದೇ ದಿನ ಆಸ್ಪತ್ರೆಯಿಂದ ಡಿಸ್ಚಾರ್ಜ ಆಗಿರುತ್ತೇನೆ ಎಂದರೆ ಸರಿ. ಮುಂದುವರೆದು ಆ ಸಮಯದಲ್ಲಿ

ಕೋವಿಡ್ ಇದ್ದ ಕಾರಣ ವೈದ್ಯರು ಪ್ರತಿದಿನ ಬಂದು ಹೋಗಿ ಎಂದು ಸೂಚಿಸಿದ್ದರು ಎನ್ನುತ್ತಾರೆ. ನನಗೆ ನೀಡಿರುವ ಡಿಸ್ಚಾರ್ಜ ಪ್ರಮಾಣಪತ್ರದಲ್ಲಿ ಆ ರೀತಿ ಬರೆದಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನಗೆ ಸದರಿ ಅಪಘಾತದಿಂದ ಯಾವುದೇ ರೀತಿಯ ತೊಂದರೆಯಾಗದಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಆದಾಯ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**